ದಲ್ಲಿಟ್ಟುಕೊಂಡು ಸುಮಾರು ಲಕ್ಷ ರೂಪಾಯಿನ ಎಸ್ಟಿಮೇಟ್ ಮಾಡಿ ಒಂದು ಪ್ಲಾನನ್ನು ಕಳುಹಿಸಿಕೊಟ್ಟಿದ್ದಾರೆ. ಹೀಗೆ ಸಿರಸಿಯ ಅಭಿವೃದ್ಧಿಗೆ ನಾನಾ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ ಎತ್ತರದ ಪ್ರದೇಶದಲ್ಲಿರುವ ಭಾಗಕ್ಕೆ ನೀರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಭರವಸೆಯನ್ನು ಕೊಡುತ್ತೇನೆ. ಈ ಬಗ್ಗೆ ಅಲ್ಲಿಯ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ಏರ್ಪಾಟು ಮಾಡುತ್ತೇನೆ.

(*ii*) *re* : *Alleged beating of Harijan Boy by Sub-Inspector of Nandgad.*

SRI B.B. SAYANAK,—Sir, I call the attention of the Chief Minister to the incident where a Harijan boy was alleged to have been beaten by the Sub-Inspector of Nandgod on 5th February, 1980.

SRI R. GUNDU RAO (Chief Minister).—Sir, I wish to make the following statement :

The Enquiry revealed that Arun Rajaput and Amar Rajaput were called to the Nandagad Police Station on 10-2-1980 but not on 5-2-1980 for interrogation in the investigation of Nandagad Police Station Crime No. 14/80 under section 457, 380 I.P.C. The facts of F.I.R. of Nandagad Police Station Crime No. 14/80 are that the complainant Chambayya Rudrayya Charantimath of Devarasigihalli lodged a complaint stating that unknown culprits had entered into Mahadev Temple at Nandagad and committed theft of idol of Mahadev and silver articles worth in all Rs. 800/- on 5-2-1980 night. Arun Rajaput Bhavansingh was called to the Police Station during the investigation of Crime Number 14/80 as the complainant suspected him. This boy was not arrested. Arun Rajput Bhavansingh is aged about 14 years as mentioned in the wound certificate issued by Assistant Surgeon, District Hospital, Belgaum on 11-2-1980. The Assistant Surgeon, District Hospital, Belgaum has issued a Medical Certificate dated 11-2-1980 in respect of Arun Rajaput Bhavansingh mentioning three injuries (all linear contusions) and these injuries are mentioned as simple and might have been caused by hard and blunt object. The age of injuries is reported to be within 24 to 48 hours. The case in Nandagad Police Station Cr. No. 14/80 is under investigation. So for there is no clue. Regarding entries in the records of Civil Hospital, Belgaum, the Asststant Surgeon, District Hospital, Belgaum has furnished that one patient namely Arun Bhavansingh Rajaput attended casualty Department with history of assault by persons on 11-2-1980, at 3-50 P.M. His address was Rayapur Galli, Nandagad. He was brought by Rajaput who is the labourer of the petitioner. The date of registration of Nandagad Police Station Crime No. 14/80 is 5-2-1980.

However, there is a *prima-facie* case of high handedness by the Police Sub-Inspector of Nandagad Police Station. The Police Sub-

Inspector is under suspension from 28-2-1980 and a Departmental Enquiry has been ordered.

SRI B. B. SAYANAK.—I pay compliment to the Chief Minister for taking prompt action. But I want to know whether this boy is a Harijan or not. Another point is that there is a primary health centre at Nandagad and the doctor there has not admitted that boy in the health centre, That was why the boy had to go to the Belgaum Civil Hospital.

SRI R. GUNDU RAO.—The question whether he is a Harjan boy does not arise.

ಅಧ್ಯಕ್ಷರು.— ರೂಲ್ ೩೧೨ ರ ಕೆಳಗೆ ಶ್ರೀ ಆತ್ಮಾನಂದ ಅವರು ಎತ್ತಿರುವ ವಿಷಯವನ್ನೂ ಮುಖ್ಯ ಮಂತ್ರಿಗಳು ಇಲ್ಲದಿರುವುದರಿಂದ ಆಮೇಲೆ ತೆಗೆದುಕೊಳ್ಳುತ್ತೇನೆ. ಶ್ರೀ ಎಸ್. ಎಸ್. ಅರಕೇರಿ ಯವರು ಮತ್ತಿತರ ಸದಸ್ಯರು ೩೧೨ ರ ಕೆಳಗೆ ಎತ್ತಿರುವ ವಿಷಯವನ್ನು ಪ್ರಸ್ತಾಪ ಮಾಡಬಹುದು.

MATTER UNDER RULE 312

(*i*) *re: grievances of the Employees of Karnataka State Khadi Gramodyog and Village Industries.*

† ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).— ಸನ್ಮಾನ್ಯ ಅಧ್ಯಕ್ಷರೇ, ಖಾದಿ ಬೋರ್ಡಿಲ್ಲಿರುವಂಥ ನೌಕರರು ಮಾರ್ಚ ೫ ನೇ ತಾರೀಖಿನಿಂದ ತಮ್ಮ ಬೇಡಿಕೆಗಳನ್ನಿಟ್ಟು ಉಪವಾಸ ಕುಳಿತಿದ್ದಾರೆ. ಈ ಸಂಬಂಧವಾಗಿ ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಒಂದೆರಡು ವಿಚಾರಗಳನ್ನು ತಿಳಿಸಬೇಕೆಂದಿದ್ದೇನೆ. ಮಹಾತ್ಮ ಗಾಂಧೀಜಿಯವರ ಅತ್ಯಂತ ಪ್ರಿಯವಾದ ಖಾದಿ ಬೋರ್ಡ್ ನೌಕರರು ತಮ್ಮದೇ ಆದ ಬೇಡಿಕೆಗಳನ್ನು ಇಟ್ಟು ಅದನ್ನು ಪೂರೈಸಿಕೊಳ್ಳುವ ಸಲುವಾಗಿ ಉಪವಾಸ ಕುಳಿತಿದ್ದಾರೆ. ಉಪವಾಸ ಕುಳಿತು ೭-೮ ದಿವಸವಾಯಿತು. ಅವ್ರ ಸೇವಾ ನಿಯಮಾವಳಿಯನ್ನು ಮಾಡಬೇಕು, ಪೆನ್‌ಷನ್ ಮತ್ತು ಗ್ರಾಚ್ಯುಯಿಟಿ ಸೌಲಭ್ಯಗಳನ್ನು ದೊರಕಿಸಿಕೊಡಬೇಕು ಮತ್ತು ಮನೆ ಕಟ್ಟುವುದಕ್ಕೆ ಮತ್ತು ಕೊಳ್ಳುವುದಕ್ಕೆ ಅಡ್ವಾನ್ಸ್ ಕೊಡಬೇಕು ಎಂಬುದು ಅವರ ಬೇಡಿಕೆಗಳಲ್ಲಿ ಪ್ರಮುಖವಾದದ್ದಾಗಿವೆ. ಖಾದಿ ಬೋರ್ಡ್ ಸ್ಥಾಪನೆಯಾಗಿ ೨೩ ವರ್ಷ ಕಳೆದಿದೆ. ಮೊದಲು ದಿವಂಗತ ಹಳ್ಳೀಕೇರಿಯವರು ಅದರ ಅಧ್ಯಕ್ಷರಾಗಿದ್ದು ಅಂದಿನಿಂದ ನಾಲ್ಕೈದು ಜನ ಅಧ್ಯಕ್ಷರಾಗಿಹೋದರೂ ಕೂಡ ಅಲ್ಲಿರುವಂಥ ನೌಕರರಿಗೆ ಸಿಗಬೇಕಾದ ಸೌಲಭ್ಯಗಳು ಸಿಗುತ್ತಿಲ್ಲ. ೨೩ ವರ್ಷದಿಂದ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಮಾಡಿಲ್ಲ. ಅವರಿಗೆ ಗ್ರಾಚ್ಯುಯಿಟಿ, ಪೆನ್‌ಷನ್ ಸವಲತ್ತನ್ನು ಕೊಟ್ಟಿಲ್ಲ. ನಾನೂ ಕೂಡ ಖಾದಿ ಬೋರ್ಡಿನ ಸದಸ್ಯನಾಗಿ ಒಂದೂವರೆವರ್ಷಗಳ ಕಾಲ ಇದ್ದೆ. ಇಗ ಆ ನೌಕರರ ಬೇಡಿಕೆಗಳ ಬಗ್ಗೆ ಎರಡು ಮೂರು ಸಾರಿ ನಿರ್ಣಯಗಳನ್ನು ಪಾಸ್ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿತ್ತು. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಸರ್ಕಾರಕ್ಕೆ ಶಿಫಾರಸು ಮಾಡಿ ಕಳುಹಿಸಿಕೊಟ್ಟರೂ ಮೂರು ನಾಲ್ಕು ವರ್ಷದಿಂದ ಅದು ಇತ್ಯರ್ಥವಾಗದೇ ಸರ್ಕಾರದಲ್ಲಿ ಬಿದ್ದಿದೆ. ೨೩ ವರ್ಷದಿಂದ ಗುಮಾಸ್ತನಾಗಿರುವವನು ಗುಮಾಸ್ತನಾಗಿಯೇ ಸೂಪರ್‌ವೈಸರ್ ಆಗಿರುವವನು ಸೂಪರ್‌ವೈಸರ್ ಆಗಿಯೇ ಮತ್ತು ಜವಾನನಾಗಿರುವವನು ಜವಾನನಾಗಿಯೇ ಇದ್ದಾನೆ. ಅವರಿಗೆ ಯಾವುದೇ ಬಡ್ತಿಗೆ ಅವಕಾಶಗಳಿಲ್ಲ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್, ಫೈನಲೈಸ್ ಮಾಡದಿರುವುದರಿಂದ ಮತ್ತು ಸೀನಿಯಾರಿಟಿ ಲಿಸ್ಟ್ ಮಾಡದೇ ಇರುವುದರಿಂದ ಅವರಿಗೆ ಅನ್ಯಾಯವಾಗಿದೆ. ನಮ್ಮ ಸರ್ಕಾರದವರು ಅಂಗವಿಕಲರಿಗೆ, ವಯಸ್ಸಾದವರಿಗೆ ಕುರುಡರಿಗೆ ಪೃದ್ಯಾಪ್ಯವೇತನ, ಮಾಸಾಶನ ಮುಂತಾದನ್ನು ಕೊಡುತ್ತಿದ್ದಾರೆ. ಆದರೆ ೨೩ ವರ್ಷದಿಂದ ಖಾದಿ ಬೋರ್ಡಿನಲ್ಲಿ ದುಡಿಯುತ್ತಿರುವ ನೌಕರರಿಗೆ ಪೆನ್‌ಷನ್ ಮತ್ತಿತರ ಸೌಲಭ್ಯ ಗಳನ್ನು ನೀಡುತ್ತಿಲ್ಲ. ಇದು ಅನ್ಯಾಯದ ಪರಮಾವಧಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್, ಫೈನಲೈಸ್ ಮಾಡದೇ ಇರುವುದರಿಂದ ಹರಿಜನರಿಗೆ ಅನ್ಯಾಯ